ಕೆ.ವಿ. ತಿರುಮಲೇಶ್

ಕಲೆ: ಪ್ರವೀಣ್ ಆಚಾರ್ಯ

# ಪೂಪನ ಪದ್ಯಗಳು

## ಪೂಪ ಅಯ್ಯೋ ಪಾಪ

ಪೂಪ ಮಾಡಿದ ಪಾಪವಾದರೂ
ಏನು? ಅಯ್ಯೋ ಪಾಪ
ಕೈಯಿಂದ ಜಾರಿ ಬಿದ್ದಿದೆ ದೀಪ

ಯಾರೂ ನೋಡುವ ಮೊದಲೇ ಗಾಜಿನ
ಚೂರುಗಳ ಹೆಕ್ತಾ ಆಗಿದೆ ಗಾಯ

ಹರಿಯುವ ನೆತ್ತರ ಬಣ್ಣವ ಕಂಡು
ಪೂಪಳಿಗಾಗಿದೆ ಭಯ

ಗೋಳೋ ಅಂತ ಅಳ್ತ ಇದ್ದಾಳೆ
ಎಲ್ಲರು ಬಂದು ನೋಡ್ತಾರೆ
ಏನಾಯ್ತೆಂದು ಕೇಳ್ತಾರೆ
ಕಾರಣ ಅವರ ಎದುರಿಗೆ ಇದೆ

ಕೂಡಲೆ ಅವಳ ಗಾಯವ ತೊಳೆದು
ದವಾಖಾನೆಗೆ ಕರೆದೊಯ್ದು

ಚುಚ್ಚು ಮದ್ದಿನ ನೋವನು ಮರೆಸಲು
ಬರುವಾಗ ಒಂದು ಐಸ್ಕ್ರೀಂ ಕೊಡಿಸಿ

ಎಲ್ಲ ಸರಿಯಾಗತೆ ನಿನ್ದೇನು ತಪ್ಪಿಲ್ಲ
ಎಂದು ಅವಳ ಕಣ್ಣೀರೊರೆಸಿ

ಅದು ಬಿಟ್ಟು ಅವಳನು ಬಯ್ದು ಗಿಯ್ದು
ಮಾಡಿದಿರಾದರೆ ಜೋಕೆ

ಆಮೇಲೆಷ್ಟು ಉಪಚರಿಸಿದರೂ
ಇಳಿಯದು ಪೂಪನ ಕೋಪ

ಬೆರಳಿನ ಗಾಯ ಬೇಗನೆ ಮರೆವುದು
ಮನಸಿನ ಗಾಯ ಹಾಗೇ ಇರುವುದು

